ಇ) ಹಾಗಿದ್ದಲ್ಲಿ, ಹೂಳು ತೆಗೆಸುವ ಕಾಮಗಾರಿಗೆ ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡುವುದೇ?

ನಾಲೆಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (NREGA) ಅಡಿಯಲ್ಲಿ ಸೂಕ್ತ ಅನುದಾನ ಬಿಡುಗಡೆ ಮಾಡಲಾಗುವುದು.

ಉಳಿದ ತುರ್ತು ಕಾಮಗಾರಿಗಳನ್ನು 2009–10ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

185 ಶ್ರೀ ಎಂ.ಶ್ರೀನಿವಾಸ

ಅ) ಮಂಡ್ಯ ತಾಲ್ಲೂಕು ಕಸಬಾ ಹೋಬಳಿ, ಕನ್ನಲಿ ಗ್ರಾಮದ ಕೆರೆಗೆ ಯಾವ ವರ್ಷದಲ್ಲಿ ಏತ ನೀರಾವರಿ ಯೋಜನೆಯನ್ನು ಮಂಜೂರು ಮಾಡಲಾಗಿದೆ.

ಮಂಡ್ಯ ತಾಲ್ಲೂಕು ಕಸಬಾ ಹೋಬಳಿಯ ಕನ್ನಲಿ ಗ್ರಾಮದ ಕೆರೆಯಿಂದ ನೀರೆತ್ತಿ ಹೊಸ ಮದ್ದೂರು ಶಾಖಾ ನಾಲೆಗೆ ಹರಿಸುವ ಕನ್ನಲಿ ಏತ ನೀರಾವರಿ ಯೋಜನೆ ಮತ್ತು ಹುಚ್ಚಲಗೆರೆ ಏ.ನೀ.ಯೋ.ಎಂಬ ಎರಡು ಯೋಜನೆಗಳನ್ನು 1994–95 ರಲ್ಲಿ ಮಂಜೂರು ಮಾಡಲಾಗಿದೆ.

ಆ) ಈ ಯೋಜನೆಗೆ ಸರ್ಕಾರ ಈವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು (ವಿವರಗಳನ್ನು ನೀಡುವುದು);

ಈ ಎರಡು ಏತ ನೀರಾವರಿ ಯೋಜನೆಗಳಿಗೆ ಪ್ರಾರಂಭದಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನದ ಒಟ್ಟು ಮೊತ್ತ ಈ ರೀತಿ ಇದೆ.

1. ಕನ್ನಲಿ ಏತ ನೀರಾವರಿ ಯೋಜನೆ – ರೂ.39.08 ಲಕ್ಷ
2. ಹುಚ್ಚಲಗೆರೆ ಏತ ನೀರಾವರಿ ಯೋಜನೆ – ರೂ.39.41 ಲಕ್ಷ

ಇ) ಹಾಗಿದ್ದಲ್ಲಿ, ಈವರೆವಿಗೂ ಕಾಮಗಾರಿ ಪೂರ್ಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ ಏತ ನೀರಾವರಿ ಯೋಜನೆಗಳ ಕಾಮಗಾರಿಗಳು ಇದುವರೆಗೆ ಪೂರ್ಣಗೊಂಡಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; ಇದರ ಗುತ್ತಿಗೆದಾರರು ಯಾರು; (ವಿವರಗಳನ್ನು ನೀಡುವುದು);

ಎರಡೂ ಯೋಜನೆಗಳಲ್ಲಿ ವಿಳಂಬಕ್ಕೆ ಕಾರಣಗಳು:

1. ರೈಸಿಂಗ್ ಮೈನ್‌ಗೆ ಅಳವಡಿಸಬೇಕಾದ ಪೈಪ್‌ಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ ಆಗಿರುವ ವಿಳಂಬ

2. ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ನಿರ್ವಹಿಸುವಲ್ಲಿ ಆಗಿರುವ ವಿಳಂಬ.
3. ರೈಸಿಗಂ ಮೈನ್‌ಗೆ ಎಂ.ಎಸ್.ಸ್ಪೆಷಲ್‌ಗಳನ್ನು ಅಳವಡಿಸುವಲ್ಲಿ ಆಗಿರುವ ವಿಳಂಬ.

ಗುತ್ತಿಗೆದಾರರ ವಿವರಗಳು:

1. ಕನ್ನಲಿ ಏತ ನೀರಾವರಿ ಯೋಜನೆ:

ಕನ್ನಲಿ ಏತ ನೀರಾವರಿ ಯೋಜನೆಯ ಕಾಮಗಾರಿಗಳನ್ನು ವಿವಿಧ ಘಟಕಗಳಾಗಿ ವಿಂಗಡಿಸಿದ್ದು, ಇದಕ್ಕೆ ಸಂಬಂಧಿಸಿದ ಗುತ್ತಿಗೆದಾರರ ವಿವರಗಳು ಕೆಳಕಂಡಂತೆ ಇರುತ್ತವೆ:

1) ಸಿವಿಲ್ ಕಾಮಗಾರಿ : ಶ್ರೀ ಪಿ. ದಶರಾಥರಾಮರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು: ಗುತ್ತಿಗೆ ಮೊತ್ತ ರೂ. 11.25 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ 19–07–1997, ಪ್ರಸ್ತುತ ಸ್ಥಿತಿ : ಪೂರ್ಣಗೊಂಡಿದೆ.
2) ಪಂಪಿಂಗ್ ಮೆಷಿನರಿ ಕಾಮಗಾರಿ : ಮೆ॥ ದೀಪಕ್ ಪ್ಲಾಸ್ಟಿಕ್ ಪ್ರೈ. ಲಿ, 1ನೇ ದರ್ಜೆ ಗುತ್ತಿಗೆದಾರರು : ಗುತ್ತಿಗೆ ಮೊತ್ತ ರೂ. 8.95 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ: 27–06–2000. ಪ್ರಸ್ತುತ ಸ್ಥಿತಿ : ಪೂರ್ಣಗೊಂಡಿದೆ.
3) ಪೈಪ್ ಮತ್ತು ಕಾಲರುಗಳ ಸರಬರಾಜು : ಮೆ॥ ವೈಷ್ಣವಿ ಕಾಂಕ್ರೀಟ್ ಪ್ರಾಡಕ್ಟ್ಸ್ : ಗುತ್ತಿಗೆ ಮೊತ್ತ ರೂ.14.54 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ 15–12–2001. ಪ್ರಸ್ತುತ ಸ್ಥಿತಿ : ಪೂರ್ಣಗೊಂಡಿದೆ
4) ಔಟ್‌ಡೋರ್ ಎಲೆಕ್ಟ್ರಿಕಲ್ ಕಾಮಗಾರಿ : ಮೆ॥ ಶಾಂತ ಎಲಕ್ಟ್ರಿಕಲ್ಸ್ : ಗುತ್ತಿಗೆ ಮೊತ್ತ ರೂ.7.33 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ 13–03–2007 ಪ್ರಸ್ತುತ ಸ್ಥಿತಿ : ಪ್ರಗತಿಯಲ್ಲಿದೆ.

II. ಹುಚ್ಚಲಗೆರೆ ಏತ ನೀರಾವರಿ ಯೋಜನೆ:

ಹುಚ್ಚಲಗೆರೆ ಏತ ನೀರಾವರಿ ಯೋಜನೆಯ ಕಾಮಗಾರಿಗಳನ್ನು ಸಹಾ ವಿವಿಧ ಘಟಕಗಳಾಗಿ ವಿಂಗಡಿಸಿದ್ದು, ಇದಕ್ಕೆ ಸಂಬಂಧಿಸಿದ ಗುತ್ತಿಗೆದಾರರ ವಿವರಗಳು ಕೆಳಕಂಡಂತೆ ಇರುತ್ತವೆ:

1) ಸಿವಿಲ್ ಕಾಮಗಾರಿ : ಶ್ರೀ. ಪಿ. ದಶರಾಥರಾಮರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು : ಗುತ್ತಿಗೆ ಮೊತ್ತ ರೂ.12.71 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ 19–07–1997. ಪ್ರಸ್ತುತ ಸ್ಥಿತಿ : ಪೂರ್ಣಗೊಂಡಿದೆ.
2) ಪಂಪಿಂಗ್ ಮೆಷಿನರಿ ಕಾಮಗಾರಿ : ಮೆ॥ ದೀಪಕ್ ಪ್ಲಾಸ್ಟಿಕ್ ಪ್ರೈ. ಲಿ, 1ನೇ ದರ್ಜೆ ಗುತ್ತಿಗೆದಾರರು : ಗುತ್ತಿಗೆ ಮೊತ್ತ ರೂ.9.48 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ: 26–07–2000. ಪ್ರಸ್ತುತ ಸ್ಥಿತಿ : ಪೂರ್ಣಗೊಂಡಿದೆ.

3) ಪೈಪ್ ಮತ್ತು ಕಾಲರುಗಳ ಸರಬರಾಜು : ಮೆ॥ಸ್ಟ್ಯಾಂಡರ್ಡ್ ಕಾಂಕ್ರೀಟ್ ಪ್ರಾಡಕ್ಟ್ಸ್ : ಗುತ್ತಿಗೆ ಮೊತ್ತ ರೂ.15.28 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ 10–07–2001. ಪ್ರಸ್ತುತ ಸ್ಥಿತಿ : ಪೂರ್ಣಗೊಂಡಿದೆ.

4) ಔಟ್‌ಡೋರ್ ಎಲೆಕ್ಟ್ರಿಕಲ್ ಕಾಮಗಾರಿ : ಮೆ॥ ಶಾಂತ ಎಲಕ್ಟ್ರಿಕಲ್ಸ್ : ಗುತ್ತಿಗೆ ಮೊತ್ತ ರೂ.8.41 ಲಕ್ಷ. ಕಾಮಗಾರಿ ವಹಿಸಿದ ದಿನಾಂಕ 13–03–2007 ಪ್ರಸ್ತುತ ಸ್ಥಿತಿ : ಪ್ರಗತಿಯಲ್ಲಿದೆ.

ಊ) ಈ ಯೋಜನೆಗೆ ಈವರೆವಿಗೂ ವೆಚ್ಚವಾಗಿರುವ ಮೊತ್ತ ಎಷ್ಟು ಮತ್ತು ಈಗ ಕಾಮಗಾರಿಯು ಯಾವ ಹಂತದಲ್ಲಿದೆ. ಪೂರ್ಣ ವಿವರಗಳನ್ನು ನೀಡುವುದು.

ಕನ್ನಲಿ ಏತ ನೀರಾವರಿ ಯೋಜನೆ:

ಕನ್ನಲಿ ಏತ ನೀರಾವರಿ ಯೋಜನೆಗೆ ಜೂನ್ 2009 ರ ಅಂತ್ಯದವರೆಗೆ ರೂ.26.45 ಲಕ್ಷಗಳ ವೆಚ್ಚವಾಗಿರುತ್ತದೆ.

ಈ ಯೋಜನೆಯ ಇನ್‌ಟೇಕ್ ವೆಲ್, ಜ್ಯಾಕ್ ವೆಲ್, ಇನ್‌ಟೇಕ್ ಛಾನಲ್, ಪಂಪ್ ಹೌಸ್, ವಾಲ್ವ್ ಛೇಂಬರ್, ಡೆಲಿವರಿ ಸಿಸ್ಟರ್ನ್, ಆರ್.ಸಿ.ಸಿ ಪೈಪ್ ರೈಸಿಂಗ್ ಮೈನ್ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಪಂಪ್ ಮತ್ತು ಮೆಷಿನರಿಗಳನ್ನು ಅಳವಡಿಸಲಾಗಿದೆ. ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ರೈಸಿಂಗ್ ಮೈನ್‌ಗೆ ಎಂ.ಎಸ್.ಸ್ಪೆಷಲ್ಸ್‌ಗಳನ್ನು ಅಳವಡಿಸಬೇಕಾಗಿರುತ್ತದೆ.

ಈ ಯೋಜನೆಯನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಹುಚ್ಚಲಗೆರೆ ಏತ ನೀರಾವರಿ ಯೋಜನೆ:

ಹುಚ್ಚಲಗೆರೆ ಏತ ನೀರಾವರಿ ಯೋಜನೆಗೆ ಜೂನ್ 2009 ರ ಅಂತ್ಯದವರೆಗೆ ರೂ.37.04 ಲಕ್ಷಗಳ ವೆಚ್ಚವಾಗಿರುತ್ತದೆ.

ಈ ಯೋಜನೆಯ ಇನ್‌ಟೇಕ್ ವೆಲ್, ಜ್ಯಾಕ್ ವೆಲ್, ಇನಟೇಕ್ ಛಾನಲ್, ಪಂಪ್ ಹೌಸ್, ವಾಲ್ವ್ ಛೇಂಬರ್, ಡೆಲಿವರಿ ಸಿಸ್ಟರ್ನ್, ಆರ್.ಸಿ.ಸಿ ಪೈಪ್ ರೈಸಿಂಗ್ ಮೈನ್ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಪಂಪ್ ಮತ್ತು ಮೆಷಿನರಿಗಳನ್ನು ಅಳವಡಿಸಲಾಗಿದೆ. ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ರೈಸಿಂಗ್ ಮೈನ್‌ಗೆ ಎಂ.ಎಸ್.ಸ್ಪೆಷಲ್ಸ್‌ಗಳನ್ನು ಅಳವಡಿಸಬೇಕಾಗಿರುತ್ತದೆ.

ಈ ಯೋಜನೆಯನ್ನು ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.

ಸಂಖ್ಯೆ:ಜಸಂಇ 10 ಎನ್‌ಎಲ್‌ಎ 2009

(ಬಸವರಾಜ ಬೊಮ್ಮಾಯಿ)
ಜಲ ಸಂಪನ್ಮೂಲ ಸಚಿವರು